**ಕರ್ನಾಟಕ ಸರ್ಕಾರದ ನಡವಳಿಗಳು**
**ಜಲ ಸಂಪನ್ಮೂಲ ಇಲಾಖೆ**

ವಿಷಯ:-ದಾವಣಗೆರೆ ತಾಲ್ಲೂಕಿನ ಒಂದು ಕೆರೆ ಹಾಗೂ ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಹೋಬಳಿಯ 41 (38+3 ಕೆರೆಗಳು) ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರನ್ನೆತ್ತಿ ಕೆರೆ ತುಂಬಿಸುವ ಯೋಜನೆಯ 2018-19ನೇ ಸಾಲಿನ ದರಪಟ್ಟಿಯನ್ವಯ ತಯಾರಿಸಲಾಗಿರುವ ರೂ.565.00 ಕೋಟಿ ಮೊತ್ತದ ಮಾರ್ಪಾಡಿತ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ: ಜಸಂಇ 78 ಎಂಎಂಬಿ 2018, ಬೆಂಗಳೂರು, ದಿನಾಂಕ:07.09.2019.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ಬೆಂಗಳೂರು ಇವರ ಪತ್ರ ಸಂಖ್ಯೆ:ಕನೀನಿನಿ/ ತಾಂತ್ರಿಕ/ ಭದ್ರಾ/ 109/ 2018-19/ 4892, ದಿ:16.12.2019 & ಸಂ.1894,ದಿ: 19.08.2020.

---***---

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಆದೇಶದಲ್ಲಿ, ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಹೋಬಳಿಯ 38 ಕೆರೆಗಳು ಹಾಗೂ ದಾವಣಗೆರೆ ತಾಲ್ಲೂಕಿನ 01 ಕೆರೆ ಸೇರಿದಂತೆ ಒಟ್ಟು 39 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರನ್ನೆತ್ತಿ ಕೆರೆ ತುಂಬಿಸುವ ಅಂದಾಜು ಮೊತ್ತ ರೂ.522.11 ಕೋಟಿಗಳ ಕಾಮಗಾರಿಗೆ ದಿನಾಂಕ:07.09.2019 ರಂದು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು.

ಮೇಲೆ ಓದಲಾದ (2) ರ ಪತ್ರದಲ್ಲಿ ಸದರಿ ಯೋಜನೆಯಲ್ಲಿ ದಾವಣಗೆರೆ ತಾಲ್ಲೂಕಿನ ಒಂದು ಕೆರೆ ಸೇರಿದಂತೆ, ಪ್ರಸ್ತಾಪಿತ ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಹೋಬಳಿಯ 39 ಕೆರೆಗಳ ಜೊತೆಗೆ ಇನ್ನು 3 ಕೆರೆಗಳಾದ ಭರಮಸಾಗರ ದೊಡ್ಡಕೆರೆ, ಭರಮಸಾಗರ ಚಿಕ್ಕಕೆರೆ ಹಾಗೂ ಎಮ್ಮೆಹಟ್ಟಿಕೆರೆ ಇವುಗಳ ಸಾಮರ್ಥ್ಯದ ಅವಶ್ಯಕತೆ ಆಧಾರದ ಮೇಲೆ (additional augmentation tanks) ಕೆರೆಗಳ ಸಾಮರ್ಥ್ಯದ ಅನುಸಾರ ಶೇ.75ರಷ್ಟು ತುಂಬಿಸುವುದು + ಶೇ.25ರಷ್ಟು ನಷ್ಟವನ್ನು ಒಳಗೊಂಡಂತೆ ಕೆರೆಗಳ ಸಾಮರ್ಥ್ಯದಷ್ಟು ನೀರನ್ನು ತುಂಬಿಸುವ ಕಾಮಗಾರಿ ಒಳಗೊಂಡಿದ್ದು, ಇದರಿಂದಾಗಿ ಈಗಾಗಲೇ ಅನುಮೋದನೆಗೊಂಡಿರುವ ರೂ.522.11 ಕೋಟಿ ಮೊತ್ತದ ಯೋಜನೆಯು ರೂ.565.00 ಕೋಟಿಗಳಿಗೆ ಪರಿಷ್ಕೃತಗೊಂಡಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು ವರದಿ ಮಾಡಿರುತ್ತಾರೆ.

ಮುಂದುವರೆದು, ದಿನಾಂಕ:24.10.2019 ರಂದು ಜರುಗಿದ ಕರ್ನಾಟಕ ನೀರಾವರಿ ನಿಗಮದ ನಿರ್ದೇಶಕರ ಮಂಡಳಿಯ 91ನೇ ಸಭೆಯಲ್ಲಿ ಭರಮಸಾಗರ ಕೆರೆ ತುಂಬಿಸುವ ಯೋಜನಾ ಕಾಮಗಾರಿಯನ್ನು ರೂ.565.00 ಕೋಟಿಗಳಲ್ಲಿ ಕೈಗೊಳ್ಳಲಾಗಿರುತ್ತದೆಂದು ಮಂಡಳಿಯ ಅವಗಾಹನೆಗೆ ತರಲಾಗಿದ್ದು, ಭರಮಸಾಗರ ಕೆರೆ ತುಂಬಿಸುವ ಯೋಜನೆಯಲ್ಲಿ ಪ್ರಸ್ತಾಪಿತ 39 ಕೆರೆಗಳ ಜೊತೆಗೆ, ಅವುಗಳ ಸಾಮರ್ಥ್ಯದ ಅವಶ್ಯಕತೆ ಆಧಾರದ ಮೇಲೆ (additional

ಅನುಮೋದನೆಗೊಂಡಿರುವ ರೂ.522.11 ಕೋಟಿ ಅಂದಾಜು ಮೊತ್ತದ ಯೋಜನೆಯು ಪರಿಷ್ಕೃತಗೊಂಡಿರುವ ಹಿನ್ನೆಲೆಯಲ್ಲಿ ರೂ.565.00 ಕೋಟಿ ಮೊತ್ತದ ಪರಿಷ್ಕೃತ ಅಂದಾಜಿಗೆ ಮಂಡಳಿಯು ಅನುಮೋದನೆ ನೀಡಿ, ಭರಮಸಾಗರ ಕೆರೆ ತುಂಬಿಸುವ ಯೋಜನೆಯ ಪರಿಷ್ಕೃತ ಅಂದಾಜಿನಲ್ಲಿ ಭರಿಸಲು ಸೂಚಿಸಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು ವರದಿ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರು ಮೇಲೆ ಓದಲಾದ (2) ರ ಪತ್ರದಲ್ಲಿ ಸದರಿ ಯೋಜನೆಯನ್ನು ಈಗಾಗಲೇ ಯೋಜಿಸಿರುವ 39 ಕೆರೆಗಳ ಜೊತೆಗೆ ಇನ್ನೂ 3 ಕೆರೆಗಳನ್ನು ಅವುಗಳ ಸಾಮರ್ಥ್ಯದ ಅವಶ್ಯಕತೆ ಆಧಾರದ ಮೇಲೆ ತುಂಬಿಸಲು ಸೇರ್ಪಡಿಸಿ, ಒಟ್ಟಾರೆ ರೂ.565.00 ಕೋಟಿ ಮೊತ್ತದ ಮಾರ್ಪಾಡಿತ ವಿವರವಾದ ಯೋಜನಾ ವರದಿಯನ್ನು ಸಲ್ಲಿಸುತ್ತಾ, ಆಡಳಿತಾತ್ಮಕ ಅನುಮೋದನೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 95 ಎಂಎಂಬಿ 2020, ಬೆಂಗಳೂರು, ದಿನಾಂಕ: 12.05.2021**

ದಾವಣಗೆರೆ ತಾಲ್ಲೂಕಿನ ಒಂದು ಕೆರೆ ಹಾಗೂ ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಹೋಬಳಿಯ 41(38+3 ಕೆರೆಗಳು) ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರನ್ನೆತ್ತಿ ಕೆರೆ ತುಂಬಿಸುವ ಯೋಜನೆಯ 2018-19 ನೇ ಸಾಲಿನ ದರಪಟ್ಟಿಯನ್ವಯ ತಯಾರಿಸಿರುವ ರೂ.565.00 ಕೋಟಿ (ರೂ.ಐನೂರ ಅರವತ್ತೈದು ಕೋಟಿ ಮಾತ್ರ) ಮೊತ್ತದ ಮಾರ್ಪಾಡಿತ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 186 ಆಕೋ-1/2020 (ಇ-ಆಫೀಸ್) ದಿನಾಂಕ:01.12.2020 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

12/5/21

**(ಶ್ರೀಹರಿ ಎಸ್.ಆರ್)**
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1)
ಜಲಸಂಪನ್ಮೂಲ ಇಲಾಖೆ

**ಪ್ರತಿಯನ್ನು:**

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ, ಲೆಕ್ಕಪರಿಶೋಧನೆ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು 01.
2. ಪ್ರಧಾನ ಮಹಾಲೇಖಪಾಲರು, (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು 01.

3. ಪ್ರಧಾನ ಮಹಾಲೇಖಪಾಲರು, (ಲೆಕ್ಕಗಳು ಮತ್ತು ಹಕ್ಕುಸ್ವಾಮ್ಯ) ಕರ್ನಾಟಕ ಬೆಂಗಳೂರು 01.
4. ಸರ್ಕಾರದ ಉಪಕಾರ್ಯದರ್ಶಿಗಳು (ಸಚಿವ ಸಂಪುಟ) ಪ್ರಕರಣ ಸಂಖ್ಯೆ:ಸಿ/158/2021, ದಿನಾಂಕ:23.04.2021.
5. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ.
8. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ, ಆರ್ಥಿಕ ಕೋಶ) ವಿಧಾನ ಸೌಧ, ಬೆಂಗಳೂರು.
9. ಅಪರ ಮುಖ್ಯ ಕಾರ್ಯದರ್ಶಿ/ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ, ಉಪ ಕಾರ್ಯದರ್ಶಿ (ಕೃಭಾಜನಿ).
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.